# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.33/2019

PW-04

CW-06

| | |
|---|---|
| ಸಾಕ್ಷಿದಾರರ ಹೆಸರುಃ | ಮನೋಜ್ ಜಾಧವ |
| ತಂದೆಃಗಂಡನ ಹೆಸರುಃ | ಮಾಲತೇಶ |
| ವಯಸ್ಸುಃ | 23 ವರ್ಷ |
| ಉದ್ಯೋಗಃ | ವ್ಯಾಪಾರ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:15.09.2021 ರಂದು ಸಾಕ್ಷಿ ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಎಲ್ಲಾ ಆರೋಪಿತರ ಹಾಗು ಚಾಸಾ-1, 4, 5, 7, 8 ರವರ ಪರಿಚಯವಿದೆ. ನಮ್ಮ ಮತ್ತು ಆರೋಪಿತರ ನಡುವೆ ಹಳೆಯ ವಿಚಾರದಲ್ಲಿ ಬಾಯಿ ಮಾತಿನ ಜಗಳವಾಗಿದ್ದು ಅಷ್ಟನ್ನು ಹೊರತುಪಡಿಸಿ ಬೇರೇನೂ ಆಗಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾಲುಗಳನ್ನು ನೋಡಿ ಗುರ್ತಿಸಿರುವುದಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ05.06.2019 ರಂದು ಪೊಲೀಸರು ನನ್ನ ಹೇಳಿಕೆ ಪಡೆದಿದ್ದು ಸದರಿ ಹೇಳಿಕೆಯಲ್ಲಿ ದಿನಾಂಕಃ04.06.2019 ರಂದು ಸಂಜೆ 7.00 ಗಂಟೆಗೆ ಹಾವೇರಿಯ ಶಿವಲಿಂಗನಗರದ 4 ನೇ ತಿರುವಿನಲ್ಲಿರುವ ಅಶೋಕ ಕರ್ಜಗಿಯವರ ಮನೆ ಮುಂದಿನ ರಸ್ತೆಯಲ್ಲಿ ನಾವು ನಿಂತಿರುವಾಗ ಚಾಸಾ-8-ಹೊಸಮನಿ ಟಾಟಾ ಎ.ಸಿ ವಾಹನ ನಂ.ಕೆಎ-26/ಎ-0118 ರಲ್ಲಿ ಒಂದು ಎತ್ತು ಹಾಗು ಎಮ್ಮೆಯನ್ನು ತೆಗೆದುಕೊಂಡು ಬಂದಿದ್ದನ್ನು ನೋಡಿದ ನಾವು ಸದರಿ ವಾಹನ ನಿಲ್ಲಿಸಿ ಅವುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಾ ಎಂದು ಕೇಳುತ್ತಿರುವಾಗ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ನನಗೆ ಚಾಸಾ-1, 4, 5, 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು ನಾವು ಸದರಿ ಎತ್ತು ಹಾಗು ಎಮ್ಮೆಯನ್ನು ಕಡಿಯಾಕೆ ತಂದೀರಿ ಎಂದು ಕೇಳುತ್ತಿದ್ದಾಗ ಆರೋಪಿತರು ಚಾಸಾ-1 ವಾಲ್ಮೀಕಿ ಜಾತಿಗೆ

ಸೇರಿದವನೆಂದು ಗೊತ್ತಿದ್ದರೂ ಸಹ ಸಾರ್ವಜನಿಕವಾಗಿ ಜಾತಿ ಹಿಡಿದು ಅವಾಚ್ಯ ಶಬ್ದಗಳಿಂದ ಬೈದು ನಂತರ ಬಡಿಗೆಗಳಿಂದ ಹಾಗು ಕೈಗಳಿಂದ ನಮಗೆ ಹಲ್ಲೆ ಮಾಡಿ ಸಾಮಾನ್ಯ ಹಾಗು ತೀವ್ರ ಸ್ವರೂಪದ ಗಾಯಪಡಿಸಿ ಜೀವ ಬೆದರಿಕೆ ಹಾಕಿದರು ಎಂದು ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿಪಿ-5 ಕ್ಕೆ ಗುರ್ತಿಸಲಾಯ್ತು. ನಿಪಿ-5 ರಂತೆ ಹೇಳಿಕೆ ನೀಡಿದ್ದರೂ ಸಹ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ಹೇಳಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ.ಎಂ.ಸಿ ವಕೀಲರಿಂದಃ**

ಶ್ರೀ ಎಂ.ಎಂ.ಸಿ ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಈ. ರಾಜೀವ ಗೌಡ)
ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.